**ಪ್ರಧಾನ  ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಉಪಸ್ಥಿತರು**

**ಶ್ರೀಮತಿ.ನಂದಿನಿ.ಎಂ.ಎನ್. ಬಿ . ಎ ., ಎಲ್ .ಎಲ್ ಬಿ .,**

**ಪ್ರಧಾನ ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರ. ದ. ನ್ಯಾ.ದಂ.**

**ಓ.ಎಸ್. ಸಂಖ್ಯೆ. 220/2018**

**ದಿನಾಂಕಃ 23 ನೇ ಫೆಬ್ರವರಿ 2024**

**ಪ್ರತಿವಾದಿಗಳು/ಅರ್ಜಿದಾರರುಃ** ಶ್ರೀ ಆರ್. ಮಹದೇವಪ್ಪ ಹಾಗೂ ಇತರರು

**ವಿರುದ್ಧ**

**ಎದುರುದಾರರು/ ವಾದಿಗಳುಃ** ಮಹದೇವಪ್ಪ  ಮತ್ತು ಇತರರು

| | | |
|---|---|---|
| *i* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ  XXVI ನಿಯಮ 9 ಸಹವಾಚಕ ಕಲಂ 151 |
| *ii* | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ಕಮೀಷನರ್ ನೇಮಕ |
| *iii* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | ***21.02.2024*** |
| *iv* | ಮಧ್ಯಂತರ ಅರ್ಜಿಯ ಸಂಖ್ಯೆ | ***ಮಧ್ಯಂತರ ಅರ್ಜಿ ಸಂಖ್ಯೆಃ 19*** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | ***21.02.2024*** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | ***23.02.2024*** |

**ಮಧ್ಯಂತರ ಅರ್ಜಿ ಸಂಖ್ಯೆ: 19 ಸಿ. ಪ್ರ. ಸಂ. ಕ್ರಮಾದೇಶ XXVI ನಿಯಮ 9 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯ ಮೇಲಿನ ಆದೇಶ**

ಪ್ರತಿವಾದಿಯು ಪ್ರಸ್ತುತ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ 151 ರಡಿಯಲ್ಲಿ ಸಲ್ಲಿಸಿ, ಅದರಲ್ಲಿ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಪ್ರಸ್ತುತ ಯಾರು ಅನುಭವ ಸ್ವಾಧೀನದಲ್ಲಿ ಇರುತ್ತಾರೆ ಎಂದು ಖಾತರಿ ಪಡಿಸಲು ನ್ಯಾಯಾಲಯದ ಕಮೀಷನರ್ ಅವರನ್ನು ನೇಮಕ ಮಾಡಬೇಕೆಂದು ಕೋರಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅದರಂತೆ ಅರ್ಜಿಯ ಜೊತೆಗಿನ ಪ್ರಮಾಣ ಪತ್ರದಲ್ಲಿ, ವಾದಿಯು ಸಲ್ಲಿಸಿರುವ ಎ ಮತ್ತು ಬಿ ದಾವಾಸ್ತಿಯು ವಾದಿಗಳಿಗೆ ಸಂಬಂಧಪಡದ ಆಸ್ತಿಯಾಗಿರುತ್ತದೆ ಹಾಗೂ ಷೆಡ್ಯೂಲ್ ಆಸ್ತಿಯ ವಿಸ್ತೀರ್ಣವನ್ನು ವಾದಿಯು ನಮೂದು ಮಾಡಿ ಚೆಕ್‌ಬಂಧಿಯನ್ನು ಪ್ರತಿವಾದಿಗಳ ಪೆಟ್ಟಿಗೆ ಜಾಗವನ್ನು ಅಂದರೆ ನಗರಸಭಾ ಆಸ್ತಿಯನ್ನು ನಮೂದಿಸಿ ವಾದಿಯರು ದಾವೆಯನ್ನು ತಂದಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಗೂ ವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿಗಳು ಆಸ್ತಿತ್ವದಲ್ಲಿರುವ ಷೆಡ್ಯೂಲ್ ಆಸ್ತಿಗೂ ವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿಗಳು ಆಸ್ತಿತ್ವದಲ್ಲಿರದ ಷೆಡ್ಯೂಲ್ ಆಸ್ತಿಯನ್ನು ನಮೂದು ಮಾಡಿ ತಪ್ಪಾದ ಷೆಡ್ಯೂಲ್ ಆಸ್ತಿಯನ್ನು ವಾದಿಗಳು ನಮೂದು ಮಾಡಿರುತ್ತಾರೆ. ಸದರಿ ದವಾ ಆಸ್ತಿಯಲ್ಲಿ ಯಾರು ಇದ್ದಾರಸಿ ಎಂದು ನ್ಯಾಯಾಲಯಕ್ಕೆ ಸತ್ಯಾಂಶ ತಿಳಿಯಬೇಕಾದರೆ ದಾವಾಸ್ತಿಯನ್ನು ಅಳತೆ ಮಾಡಿ ವಿವರಣೆಯನ್ನು ನೀಡಿದಾಗ ಗೊತಾಗುತ್ತದೆಂದು ದಾವಾಸ್ತಿಯಲ್ಲಿ ಯಾರು ಇದ್ದಾರೆ, ಇಲ್ಲವೇ ಎಂಬುವುದನ್ನು ನ್ಯಾಯಾಲಯವು ಖಾತರಿಪಡಿಸಲು ನ್ಯಾಯಾಲಯದ ಕಮೀಷನರ್ ಅನ್ನು ನೇಮಕ ಮಾಡಬೇಕೆಂದು ಅದರಂತೆ ಆದೇಶ ಮಾಡಬೇಕೆಂದು ಕೋರಿರುತ್ತಾರೆ.

3. ವಾದಿಗಳು/ಎದುರುದಾರರು ಸದರಿ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ, ಪ್ರಸ್ತುತ ದಾವೆಯು ವಾದಿಗಳ ಪರ ವಾದ ಮಂಡನೆಗೆಂದು ಕಾಯ್ದಿರಿಸಿದ್ದು ಈ ಹಂತದಲ್ಲಿ ಪ್ರತಿವಾದಿಗಳು/ಅರ್ಜಿದಾರರು ದಾವೆಯನ್ನು ಮುಂದೂಡುವ ಕಾರಣದಿಂದ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ದಾವೆಯಲ್ಲಿ ಎ ಮತ್ತು ಬಿ ಎಂಬ ಎರಡು ಷೆಡ್ಯೂಲ್ ಆಸ್ತಿಗಳನ್ನು ನಮೂದು ಮಾಡಿದ್ದು ಪ್ರತಿವಾದಿಗಳು/ಅರ್ಜಿದಾರರು ಮಧ್ಯಕಾಲೀನ ಅರ್ಜಿಯಲ್ಲಿ ಯಾವ ದಾವಾ ಷೆಡ್ಯೂಲ್ ಆಸ್ತಿಗೆ ಕಮೀಷನರ್ ಅನ್ನು ನೇಮಕ ಮಾಡಬೇಕೆಂದು ಸ್ಪಷ್ಟವಾಗಿ ನಮೂದು ಮಾಡಿರುವುದಿಲ್ಲ ಹಾಗೂ ಪ್ರಸ್ತುತ ದಾವೆಯಲ್ಲಿ ದಾವಾ ಬಿ ಷೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿಗಳು ಅಕ್ರಮವಾಗಿ ತಾತ್ಕಾಲಿಕವಾಗಿ ಹಾಕಿಕೊಂಡಿರುವ ಪೆಟ್ಟಿಗೆ ಅಂಗಡಿಗಳ/ಶೆಡ್ ಗಳನ್ನು ಪ್ರತಿವಾದಿಗಳು ತಮ್ಮ ಖರ್ಚಿನಿಂದ ತೆರವುಗೊಳಿಸಿ ಸ್ವಾಧೀನವನ್ನು ಬಿಡಿಸಿಕೊಡುವಂತೆ ವಾದಿಗಳು ಕೇಳಿರುವುದರಿಂದ ಪ್ರಸ್ತುತ ಅರ್ಜಿಯು ಊರ್ಜಿತವಲ್ಲವೆಂದು ಪರಿಗಣಿಸಿ ಅರ್ಜಿಯನ್ನು ವಜಾಕರಿಸಬೇಕೆಂದು ಕೋರಿ ತಕರಾರನ್ನು ಸಲ್ಲಿಸಿರುತ್ತಾರೆ.

4. ಅದರಂತೆ ಉಭಯತ್ರರರ ಪರ ವಾದವನ್ನು ಆಲಿಸಲಾಯಿತು ಮತ್ತು ದಾವೆಯಲ್ಲಿನ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿ ನ್ಯಾಯಾಲಯದ ವಿವೇಚನೆಗೆ ಈ ಕೆಳಕಂಡ ಅಂಶಗಳ ಪ್ರಶ್ನೆಗಳು ಉದ್ಭವವಾಗಿರುತ್ತವೆ.

*1. ಅರ್ಜಿದಾರ/ವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ: 19 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ. 151 ರಡಿಯಲ್ಲಿನ ಅರ್ಜಿಯನ್ನು ಪುರಸ್ಕರಿಸಲು ಸಕಾರಣಗಳಿರುತ್ತವೆಯೇ ?*

*2. ಯಾವ ಆದೇಶ?*

**5.** ಅಂತಿಮವಾಗಿ ಮಧ್ಯಂತರ ಅರ್ಜಿಯಲ್ಲಿನ ಅಂಶಗಳು ಮತ್ತು ತಕರಾರು ಹಾಗೂ ವಾದವನ್ನು ಕೂಲಂಕೂಶವಾಗಿ ಪರಿಶೀಲಿಸಿ ನ್ಯಾಯಾಲಯವು ಮೇಲ್ಕಂಡ ಅಂಶಗಳ ಪ್ರಶ್ನೆಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಯಿತು.

ಅಂಶ 1ಃ ನಕಾರಾತ್ಮಕವಾಗಿ

ಅಂಶ 2 ಃ ಈ ಕೆಳಕಂಡ ಅಂತಿಮ ಕಾರಣಗಳಿಂದಾಗಿ,

**ಕಾರಣಗಳು**

6.**ಅಂಶ 1 ಃ** ಅರ್ಜಿದಾರರು/ಪ್ರತಿವಾದಿಗಳು ಪ್ರಸ್ತುತ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ 151 ರಡಿಯಲ್ಲಿ ಸಲ್ಲಿಸಿ, ಅದರಲ್ಲಿ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಪ್ರಸ್ತುತ ಯಾರು ಅನುಭವ ಸ್ವಾಧೀನದಲ್ಲಿ ಇರುತ್ತಾರೆ ಎಂದು ಖಾತರಿ ಪಡಿಸಲು ನ್ಯಾಯಾಲಯದ ಕಮೀಷನರ್ ಅವರನ್ನು ನೇಮಕ ಮಾಡಬೇಕೆಂದು, ವಾದಿಯು ಸಲ್ಲಿಸಿರುವ ಎ ಮತ್ತು ಬಿ ದಾವಾಸ್ತಿಯು ವಾದಿಗಳಿಗೆ ಸಂಬಂಧಪಡದ ಆಸ್ತಿಯಾಗಿರುತ್ತದೆ ಹಾಗೂ ಷೆಡ್ಯೂಲ್ ಆಸ್ತಿಯ ವಿಸ್ತೀರ್ಣವನ್ನು ವಾದಿಯು ನಮೂದು ಮಾಡಿ ಚೆಕ್ಕುಬಂಧಿಯನ್ನು ಪ್ರತಿವಾದಿಗಳ ಪೆಟ್ಟಿಗೆ ಜಾಗವನ್ನು ಅಂದರೆ ನಗರಸಭಾ ಆಸ್ತಿಯನ್ನು ನಮೂದಿಸಿ ವಾದಿಯರು ದಾವೆಯನ್ನು ತಂದಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಗೂ ವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿಗಳು ಆಸ್ತಿತ್ವದಲ್ಲಿರದ ಷೆಡ್ಯೂಲ್ ಆಸ್ತಿಯನ್ನು ನಮೂದು ಮಾಡಿ ತಪ್ಪಾದ ಷೆಡ್ಯೂಲ್ ಆಸ್ತಿಯನ್ನು ವಾದಿಗಳು ನಮೂದು ಮಾಡಿರುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ಯಾರು ಇದ್ದಾರೆ ಎಂದು ನ್ಯಾಯಾಲಯಕ್ಕೆ ಸತ್ಯಾಂಶ ತಿಳಿಯಬೇಕಾದರೆ ದಾವಾಸ್ತಿಯನ್ನು ಅಳತೆ ಮಾಡಿ ವಿವರಣೆಯನ್ನು ನೀಡಿದಾಗ ಗೊತ್ತಾಗುತ್ತದೆಂದು ದಾವಾಸ್ತಿಯಲ್ಲಿ ಯಾರು ಇದ್ದಾರೆ,

ಇಲ್ಲವೇ ಎಂಬುವುದನ್ನು ನ್ಯಾಯಾಲಯವು ಖಾತರಿಪಡಿಸಲು ನ್ಯಾಯಾಲಯದ ಕಮೀಷನರ್ ಅನ್ನು ನೇಮಕ ಮಾಡಬೇಕೆಂದು ನಿಲುವನ್ನು ತೆಗೆದುಕೊಂಡಿರುತ್ತಾರೆ. ಆದರೆ ವಾದಿಗಳು/ಎದುರುದಾರರು ತೆಗೆದುಕೊಂಡಿರುವ ನಿಲುವು ಏನೆಂದರೆ, ಪ್ರತಿವಾದಿಗಳು/ಅರ್ಜಿದಾರರು ಮಧ್ಯಕಾಲೀನ ಅರ್ಜಿಯಲ್ಲಿ ಯಾವ ದಾವಾ ಷೆಡ್ಯೂಲ್ ಆಸ್ತಿಗೆ ಕಮೀಷನರ್ ಅನ್ನು ನೇಮಕ ಮಾಡಬೇಕೆಂದು ಸ್ಪಷ್ಟವಾಗಿ ನಮೂದು ಮಾಡಿರುವುದಿಲ್ಲ ಹಾಗೂ ಪ್ರಸ್ತುತ ದಾವೆಯನ್ನು ವಾದಿಗಳು ಹಕ್ಕು ಘೋಷಣೆ, ಸ್ವಾಧೀನ ಹಾಗೂ ಶಾಶ್ವತ ನಿರ್ಬಂಧಕಾಜ್ಞ ಆದೇಶವನ್ನು ಕೋರಿ, ದಾವಾ ಬಿ ಷೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿಗಳು ಅಕ್ರಮವಾಗಿ ತಾತ್ಕಾಲಿಕವಾಗಿ ಹಾಕಿಕೊಂಡಿರುವ ಪೆಟ್ಟಿಗೆ ಅಂಗಡಿಗಳ/ಶೆಡ್ ಗಳನ್ನು ಪ್ರತಿವಾದಿಗಳು ತಮ್ಮ ಖರ್ಚಿನಿಂದ ತೆರವುಗೊಳಿಸಿ ಸ್ವಾಧೀನವನ್ನು ವಾದಿಗಳಿಗೆ ನೀಡುವಂತೆ ದಾವೆಯನ್ನು ದಾಖಲಿಸಿದ್ದು, ಸದರಿ ದಾವಾ ಬಿ ಷೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿಗಳೇ ಅಕ್ರಮವಾಗಿ ಸ್ವಾಧೀನದಲ್ಲಿ ಇರುವುದಾಗಿ ನಿಲುವನ್ನು ತೆಗೆದುಕೊಂಡಿರುತ್ತಾರೆ. ಅಲ್ಲದೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಪೆಟ್ಟಿಗೆ ಅಂಗಡಿಗಳನ್ನು ಪ್ರತಿವಾದಿಗಳು ಸುಮಾರು 35 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುತ್ತಾರೆ. ಹಾಗೆಯೇ ಅವರ ಸ್ವಾಧೀನದಲ್ಲಿ ಇರುವುದರಿಂದ ವಾದಿಗಳು ಪ್ರತಿವಾದಿಗಳ ವಿರುದ್ಧ ಕಾಲ ಪರಿಮಿತಿ ಅಧಿನಿಯಮ ಅಡಿಯಲ್ಲಿ ಸ್ವಾಧೀನವನ್ನು ಕೇಳಲು ಅರ್ಹರಾಗಿರುವುದಿಲ್ಲವೆಂದು ನಿಲುವನ್ನು ತೆಗೆದುಕೊಂಡಿರುತ್ತಾರೆ. ಹೀಗಿರುವಲ್ಲಿ ಪ್ರಸ್ತುತ ದಾವೆಯಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪಕ್ಷಗಾರರ ಹಕ್ಕು, ಹಿತಾಸಕ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ರೀತಿಯ ದ್ವಂದ್ವತೆ ಇರುವುದಿಲ್ಲ. ಅಲ್ಲದೇ ಉಭಯಪಕ್ಷಗಾರರು ಪ್ರಸ್ತುತ ಷೆಡ್ಯೂಲ್ ಸ್ವತ್ತಿನಲ್ಲಿ ಯಾರು ಇದ್ದಾರೆ ಎಂದು ನಿಲುವನ್ನು ತೆಗೆದುಕೊಂಡಿರುವುದರಿಂದ ಹಾಗೂ ಈಗಾಗಲೇ

ನ್ಯಾಯಾಲಯದಲ್ಲಿ ಉಭಯಪಕ್ಷಗಾರರ ವಿಚಾರಣೆ ಮುಕ್ತಾಯವಾಗಿ ವಾದಿಯ ವಾದಮಂಡನೆಗಾಗಿ ದಿನಾಂಕವನ್ನು ಕಾಯ್ದಿರಿಸಲಾಗಿದ್ದು ಈ ಹಂತದಲ್ಲಿ ಪ್ರಸ್ತುತ ದಾವಾಸ್ತಿಯಲ್ಲಿ ಸ್ವಾಧೀನ ಯಾರು ಇದ್ದಾರೆ ಎಂಬ ಬಗ್ಗೆ ಪರಿಗಣಿಸಲು ಬರುವುದಿಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಇರುವುದಾಗಿ ಪ್ರತಿವಾದ ಪತ್ರದಲ್ಲೇ ತಿಳಿಸಿದ್ದು ವಾದಿಗಳು ಸದರಿ ನಿಲುವನ್ನು ಅಲ್ಲಗಳೆದಿರುವುದಿಲ್ಲ. ಅಲ್ಲದೇ ಮಧ್ಯಂತರ ಅರ್ಜಿಯಲ್ಲಿ ಯಾವ ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಸ್ವಾಧೀನದ ಬಗ್ಗೆ ಗೊಂದಲವಿದ್ದಾಗ ಕಮೀಷನರ್ ರವರನ್ನು ನ್ಯಾಯಾಲಯ ನೇಮಿಸಬಹುದಾಗಿರುತ್ತದೆ. ಆದರೆ ಪ್ರಸ್ತುತ ದಾವೆಯಲ್ಲಿ ಅಂತಹ ಯಾವುದೇ ಗೊಂದಲವಿರುವುದಿಲ್ಲ ಮತ್ತು ಅಂಶಹ ವಿವಾದವಿರುವುದಿಲ್ಲವಾದ ಕಾರಣ ವಿವಾದಾಂಶಗಳನ್ನು ಬಗೆಹರಿಸಲು ದಾಖಲಾತಿಗಳು ಮತ್ತು ಸಾಕ್ಷ್ಯ ದಾಖಲೆಗಳಿಂದಲೇ ಬಗೆಹರಿಸಬಹುದಾಗಿರುವುದರಿಂದ ಅರ್ಜಿಯನ್ನು ವಜಾಕರಿಸಬಹುದಾಗಿರುತ್ತದೆ ಎಂಬುದಾಗಿ ವಾದವನ್ನು ಮಂಡಿಸಿರುತ್ತಾರೆ ಎಂದು ನ್ಯಾಯಾಲಯ ಅಭಿಪ್ರಾಯಿಸಿ

***ಶ್ರೀಮತಿ ರತ್ನಮ್ಮ ಮತ್ತು ಇತರರು ವಿರುದ್ಧ ಶ್ರೀಮತಿ ಅಡೆಮ್ಮ ಎಂಬುವವರ ಪ್ರಕರಣದಲ್ಲಿ 2010(3) ಕೆ.ಎಲ್.ಜೆ .130, ಎ.ಐ.ಆರ್. 2004 ಕರನಾಟಕ 92 ಎ.ಐ.ಆರ್. 2004 ಎಸ್.ಕೆ.39*** ರ ಪ್ರಕರಣಗಳಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಉಭಯತ್ರರರ ವಿಚಾರಣೆ ಮುಗಿದು, ವಾದಮಂಡನೆಯ ಅಂತಿಮ ಹಂತಕ್ಕೆ ದಿನಾಂಕ ನಿಗದಿಗೊಳಿಸಿರುವಂತಹ ಸಮಯದಲ್ಲಿ ನ್ಯಾಯಾ ವಿತರಣೆಗೆ ತೊಡಕು ಉಂಟಾಗುವ ಸಂದರ್ಭಗಳಿರದಿದ್ದಲ್ಲಿ ಅಂತಹ ಸಂದರ್ಭದಲ್ಲಿ ಕಮೀಷನರ್ ನೇಮಕಕ್ಕೆ ಸಲ್ಲಿಸಿರುವಂತಹ ಮಧ್ಯಂತರ ಅರ್ಜಿಗಳನ್ನು ವಜಾಕರಿಸಬಹುದೆಂದು ತೀರ್ಪಿನಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ಆಧರಿಸಿ ಪ್ರಸ್ತುತ

ದಾವೆಯಲ್ಲಿಯೂ ಸಹ ದಾವೆಯು ವಾದಮಂಡನೆಗೆಂದು ದಿನಾಂಕ ನಿಗದಿಯಾಗಿರುವುದರಿಂದ ಮತ್ತು ವಿವಾದಾಂಶ ಇತ್ಯರ್ಥಕ್ಕೆ ಕಮೀಷನರ್ ನೇಮಕ ಅಗತ್ಯವಿರುವುದಿಲ್ಲವೆಂದು ಪರಿಗಣಿಸಿ **ಅಂಶ–1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.**

8. **ಅಂಶ 2 ಃ** ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

## ಆದೇಶ

*ವಾದಿ/ಅರ್ಜಿದಾರ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ 19 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXVI ನಿಯಮ 9 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ರೂ. 200/– ಖರ್ಚಿನೊಂದಿಗೆ ವಜಾಗೊಳಿಸಲಾಯಿತು.*

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 23 **ನೇ ಫೆಬ್ರವರಿ 2024** ರಂದು ಉಚ್ಚರಿಸಲಾಯಿತು)

**(ಶ್ರೀಮತಿ. ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

**(ಪ್ರತ್ಯೇಕ ಆದೇಶವನ್ನು ಮುಕ್ತ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)**

**ಆದೇಶ**

*ವಾದಿ/ಅರ್ಜಿದಾರ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ: 19 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXVI ನಿಯಮ 9 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ರೂ. 200/- ಖರ್ಚಿನೊಂದಿಗೆ ವಜಾಗೊಳಿಸಲಾಯಿತು.*

**(ಶ್ರೀಮತಿ. ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

For Argument by

Prl Civil Judge & JMFC.,
Kollegal